ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಮಿಷ್ ಆದ್ದು. [ನಂ. 23.

ಬೆಂಗಳೂರು, ಗುರುವಾರ, ಜೂ ತಾ|| 10, ಸ 1909.

II ನೆ ಬಾಗ.

ಇಂಡ್ಯಗವರ್ನ್‌ಮೆಂಟ್, ರಿಸಿಡಂಟರು, ಚೀಫ್ ಜಡ್ಜ್‌ರು ಮೆಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತಪ್ಪು.

ಸ 1909ನೆ ಇಸವಿ ಮೇ ತಿಂಗಳು 19ನೆ ತಾರೀಖಿನ 82ನೆ ನಂಬರು ರೂಲ್ ಆಫ್ ಪ್ರಾಕ್ಟಿಸ್.

ಗೌರ್ನಮೆಂಟಿನವರ ಅನುಮತಿಯಿಂದ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 554ನೆ ಸೆಕ್ಷನ್ ಪ್ರಕಾರ ಜಡ್ಜ್‌ಮೆಂಟುಗಳನ್ನು ಬರೆಯತಕ್ಕ ವಿಚಾರದಲ್ಲಿ ಕ್ರಿಮಿನಲ್ ಕೋರ್ಟುಗಳ ಪದ್ಧತಿಯನ್ನು ಸರಿಪಡಿಸುವ ಬಗ್ಗೆ ಚೀಫ್ ಕೋರ್ಟಿನವರು ಈ ಕೆಳಗಿನ ರೂಲ್ಸುಗಳನ್ನು ವಿಧಿಸಿರುತ್ತಾರೆ.

ವಿಚಾರಣೆ ಆದ ಸಾಕ್ಷಿಗಳ ಹೆಸರುಗಳನ್ನೂ, ಹಾಜರಾದ ಎಗ್ಜಿಬಿಟ್ಟುಗಳ ಮತ್ತು ಅಜಬಾಖುಗಳ ತಪ್ಶೀಲನ್ನು ಮತ್ತು ಅಪರಾಧಿಗಳ ಹೇಳಿಕೆಗಳನ್ನೂ ಬಂದು ಬೇರೆ ಫಾರಂನಲ್ಲಿ ಗುಮಾಸ್ತೆಯು ಬರಿಯತಕ್ಕದ್ದು. ಈ ಫಾರಂ ಜಡ್ಜ್‌ಮೆಂಟಿನ ಬಂದು ಭಾಗವೆನ್ನಿಸಿಕೊಳ್ಳದೆ ಜಡ್ಜ್‌ಮೆಂಟಿನ ಜೊತೇಲಿ ಬೇರೆಯಾಗಿ ಸೇರಿಸತಕ್ಕದ್ದು.

2. ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 367ನೆ ಸೆಕ್ಷನ್ ಪ್ರಕಾರ ಜಡ್ಜ್‌ಮೆಂಟು ಪೂರ್ತಿಯಾಗಿ ಮ್ಯಾಜಿಸ್ಟ್ರೇಟು ಅಥವಾ ಜಡ್ಜ್‌ಯು ಸ್ವಂತ ಅಕ್ಷರದಲ್ಲಿರತಕ್ಕದ್ದು.

3. ಸ 1884ನೆ ಇಸವಿ ಆಗಸ್ಟು ತಿಂಗಳು 22ನೆ ತಾರೀಖಿನ 33ನೆ ರೂಲ್ ಆಫ್ ಪ್ರಾಕ್ಟಿಸನ್ನು ಮತ್ತು ಈ ಮಾರ್ಜಿನ್ನಲ್ಲಿ ನಮೂದಿಸಿರುವ ಈ ಕೋರ್ಟಿನ ಸರ್ಕ್ಯುಲರ್ ಲೆಟರುಗಳನ್ನು ಮತ್ತು ಪ್ರೊಸೀಡಿಂಗ್ಸುಗಳನ್ನು ಸಹ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

(1) ಸ 1881ನೆ ನವಂಬರು 10ನೆ ತಾರೀಖಿನ 28ನೆ ನಂಬರು ಸರ್ಕ್ಯುಲರ್ ಲೆಟರ್.
(2) ಸ 1887ನೆ ಅಕ್ಟೋಬರ್ 15ನೆ ತಾರೀಖಿನ 71ನೆ ನಂಬರು ಸರ್ಕ್ಯುಲರ್ ಲೆಟರ್.
(3) ಸ 1885ನೆ ಫೆಬ್ರವರಿ 16ನೆ ತಾರೀಖಿನ 53ನೆ ನಂಬರು ಸರ್ಕ್ಯುಲರ್ ಲೆಟರ್.
(4) ಸ 1889ನೆ ಜನವರಿ 28ನೆ ತಾರೀಖಿನ 81ನೆ ನಂಬರು ಸರ್ಕ್ಯುಲರ್ ಲೆಟರ್.
(5) ಸ 1894ನೆ ನವಂಬರು 26ನೆ ತಾರೀಖಿನ 119ನೆ ನಂಬರು ಸರ್ಕ್ಯುಲರ್ ಲೆಟರ್.
(6) ಸ 1899ನೆ ನವಂಬರು 15ನೆ ತಾರೀಖಿನ 143ನೆ ನಂಬರು ಸರ್ಕ್ಯುಲರ್ ಲೆಟರ್.
(7) ಸ 1885ನೆ ಫೆಬ್ರವರಿ 5ನೆ ತಾರೀಖಿನ 4122-3163ನೆ ನಂಬರ್ ಚೀಫ್ ಕೋರ್ಟ್ ಪ್ರೊಸೀಡಿಂಗ್ಸ್.
(8) ಸ 1893ನೆ ಮಾರ್ಚಿ 24ನೆ ತಾರೀಖಿನ ಚೀಫ್ ಕೋರ್ಟ್ ಪ್ರೊಸೀಡಿಂಗ್ಸ್.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.